ಉ) ನವೋದಯ ಶಾಲೆ ಜಿಲ್ಲೆಗೆ ಒಂದು ಮಾತ್ರ. ಈಗಾಗಲೇ ಬೆಳಗಾಂ ಜಿಲ್ಲೆಗೆ ಒಂದು ನವೋದಯ ಶಾಲೆ ಮಂಜೂರಾಗಿದೆ. ಆದಕಾರಣ ಕಿತ್ತೂರು ರಾಣಿ ಮಸತಿ ಶಾಲೆಯನ್ನು ಮತ್ತೊಂದು ಸಂಸ್ಥೆ ನಡೆಸುತ್ತಿರುವುದರಿಂದ ನವೋದಯ ಶಾಲೆಯನ್ನಾಗಿ ಪರಿವರ್ತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

೧೯೮೬-೮೭ರಲ್ಲಿ ಕರ್ನಾಟಕಕ್ಕೆ ಮಂಜೂರಾದ ನವೋದಯ ವಿದ್ಯಾಲಯಗಳು.

| ಕ್ರಮ ಸಂಖ್ಯೆ | ಜಿಲ್ಲೆ | ಸ್ಥಳ |
|---|---|---|
| ೧. | ಬೆಂಗಳೂರು ಗ್ರಾಂತರ | ವಿದ್ಯಾನಗರ, ಶಿಕ್ಷಕರ ತರಬೇತಿ ಕೇಂದ್ರ ದೇವನಹಳ್ಳಿ ತಾಲ್ಲೂಕು. |
| ೨. | ಕೋಲಾರ | ಏನಿಗದಲ್ಲ ವಿದ್ಯಾಪೀಠ ಚಿಂತಾಮಣಿ ತಾಲ್ಲೂಕು. |
| ೩. | ಮಂಡ್ಯ | ಶಿವಾರಗುಡ್ಡ, ಮದ್ದೂರು ತಾಲ್ಲೂಕು. |
| ೪. | ಚಿಕ್ಕಮಗಳೂರು | ಬಾಳೆಹೊನ್ನೂರು, ಕೊಪ್ಪ ತಾಲ್ಲೂಕು. |
| ೫. | ಶಿವಮೊಗ್ಗ | ತುಂಗಾ ಆನೇಕಲ್ ವಿದ್ಯಾಪೀಠ, ಗಾಜನೂರು ಗ್ರಾಮ |
| ೬. | ರಾಯಚೂರು | ಕುಕನೂರು. |

೧೯೮೭-೮೮ರಲ್ಲಿ ರಾಜ್ಯಕ್ಕೆ ಮಂಜೂರಾದ ನವೋದಯ ವಿದ್ಯಾಲಯಗಳು

| | | |
|---|---|---|
| ೧. | ಉತ್ತರ ಕನ್ನಡ | ಶೆಟ್ಟಿಗೆರೆ ಗ್ರಾಮ |
| ೨. | ಹಾಸನ | ಪೂವಿನಕೆರೆ ಗ್ರಾಮ |
| ೩. | ಬೀದರ್ | ತ್ರಿಪಾಣಿ ಗ್ರಾಮ |
| ೪. | ಕೊಡಗು | ಗಾಳಿಬೀಡು ಗ್ರಾಮ |
| ೫. | ಗುಲ್ಬರ್ಗ | ಬೀಮರಾಯನಗುಡಿ ಗ್ರಾಮ |
| ೬. | ಧಾರವಾಡ | ಕೆಳಗೇರಿ ಗ್ರಾಮ |
| ೭. | ಬೆಳಗಾಂ | ಕೊತಲಿಕುಪ್ಪನವಾಡಿ ಗ್ರಾಮ |
| ೮. | ಬಿಜಾಪುರ | ಅಲಮಟ್ಟಿ ಡ್ಯಾಂ ಸೈಟ್ ಗ್ರಾಮ |
| ೯. | ಬಳ್ಳಾರಿ | ಚಿಕ್ಕ ಜೋಗಿ ಹಳ್ಳಿ ಗ್ರಾಮ |
| ೧೦. | ಚಿತ್ರದುರ್ಗ | ಕಾರ್ತಲ್ ಗ್ರಾಮ |

೧೯೮೮-೮೯

| | | |
|---|---|---|
| ೧. | ಮೈಸೂರು | ಹೊಂದ್ರುಬಾಳ ಕಾಲೋನಿ, ನೆಲ್ಲೂರು ಗ್ರಾಮ. ಚಾಮರಾಜನಗರ ತಾಲ್ಲೂಕು. |
| ೨. | ತುಮಕೂರು | ಗೊಲ್ಲಹಳ್ಳಿ, ತುಮಕೂರು ತಾಲ್ಲೂಕು. |

## ರಾಷ್ಟ್ರೀಯ ಹೆದ್ದಾರಿ ನಂ ೧೩ನ್ನು ಸಂಸ್ಥವಸ್ಥಿತವಾಗಿಡುವ ಬಗ್ಗೆ

೧೪೧೭ (೧೧೮೭) ಶ್ರೀ ವಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಷ್ಟ್ರೀಯ ಹೆದ್ದಾರಿ ನಂ. ೧೩ ಕರ್ನಾಟಕದಲ್ಲಿ ಎಲ್ಲಿಂದ ಪ್ರಾರಂಭವಾಗಿ ಎಲ್ಲಿಗೆ ಮುಗಿಯುವುದು. ಹಾಗೂ ಅದರ ಉದ್ದಳತೆ ಎಷ್ಟು ?

ಆ) ಕಳೆದ ಐದು ವರ್ಷಗಳಲ್ಲಿ ಇದಕ್ಕಾಗಿ ಖರ್ಚು ಮಾಡಿದ ರಾಜ್ಯ ಸರ್ಕಾರದ ಹಣ ಹಾಗೂ ಕೇಂದ್ರ ಸರ್ಕಾರದ ಹಣ ಎಷ್ಟು ?

ಇ) ರಾಷ್ಟ್ರೀಯ ಹೆದ್ದಾರಿ ನಂ. ೧೩ರ ಮೇಲೆ ಹಲವಾರು ತೊಂದರೆಗಳಿದ್ದು ಅದನ್ನು ಸುವ್ಯವಸ್ಥಿತ ಹೆದ್ದಾರಿಯನ್ನಾಗಿ ಮಾಡಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ರಾಷ್ಟ್ರೀಯ ಹೆದ್ದಾರಿ ನಂ. ೧೩ ಕರ್ನಾಟಕದಲ್ಲಿ ಚಿತ್ರದುರ್ಗ ಟೌನ್ ಹತ್ತಿರ ಪ್ರಾರಂಭವಾಗಿ ಬಿಜಾಪುರ ಜಿಲ್ಲೆಯ ಮಹಾರಾಷ್ಟ್ರ ಗಡಿಯಲ್ಲಿ ಮುಗಿಯುವುದು. ಕರ್ನಾಟಕದಲ್ಲಿ ಹಾದು ಹೋಗುವ ಭಾಗದ ಇದರ ಉದ್ದ ೪೦೮ ಕಿ.ಮೀ ಗಳು.

ಆ) ಇದರಲ್ಲಿ ರಾಜ್ಯ ಸರ್ಕಾರದ ವೆಚ್ಚ ಇಲ್ಲ. ಕೇಂದ್ರ ಸರ್ಕಾರದ ಅನುದಾನದಿಂದ ಮಾಡಿದ ಒಟ್ಟು ಖರ್ಚು ೧೪.೫೪ ಕೋಟಿ ರೂ.ಗಳು.

ಇ) ಕರ್ನಾಟಕದಲ್ಲಿ ಹಾದು ಹೋಗುವ ಪೂರಾ ೪೦೮.೦೦ ಕಿ.ಮೀ ಉದ್ದವು ಏಕಪಥರಸ್ತೆಯಾಗಿರುತ್ತದೆ. ಈಗ ಹಾಲಿ ೧೧೧.೩೦ ಕಿ.ಮೀ ಉದ್ದದ ರಸ್ತೆಯನ್ನು ೫೫.೬೭ ಕೋಟಿ ರೂ.ಗಳ ಖರ್ಚಿನಲ್ಲಿ ದ್ವಿಪಥರಸ್ತೆಯನ್ನಾಗಿ ಮಾಡಲಾಗುತ್ತಿದೆ.

೪೩೩.೦೦ ಕಿ ಮೀ ಉದ್ದದ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಮಾಡಲು ೨೨೫೫ ಕೋಟಿ ರೂ.ಗಳ ಅಂದಾಜಿಗೆ ಕೇಂದ್ರ ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸುತ್ತಿದೆ. ಏಳನೇ ಪಂಚ ವಾರ್ಷಿಕ ಯೋಜನೆಯಲ್ಲಿ ೨೩೬ ಕಿ.ಮೀ. ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಮಾಡಿ ಬಲಪಡಿಸಲು ೩೬ ಕೋಟಿ ರೂ.ಗಳ ಯೋಜನೆಯನ್ನು ವಿಶ್ವಬ್ಯಾಂಕ್‌ಗೆ ಕೇಂದ್ರ ಸರ್ಕಾರದವರು ಕಳುಹಿಸಿರುತ್ತಾರೆ. ಇದರ ಸರ್ವೆಕಾರ್ಯ ನಡೆಯುತ್ತಿದೆ.

## ರಾಜ್ಯದಲ್ಲಿ ಮೀನು ಮರಿ ಉತ್ಪಾದನಾ ಕೇಂದ್ರಗಳ ಬಗ್ಗೆ

೧೪೧೮ (೧೧೯೨) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಬಂದರು ಹಾಗೂ ಮೀನುಗಾರಿಕಾ ಮತ್ತು ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಎಷ್ಟು ಮೀನುಮರಿ ಉತ್ಪಾದಕ ಘಟಕಗಳು ಇವೆ ಅವುಗಳ ಹೆಸರೇನು ?

ಆ) ಮೀನುಮರಿ ಉತ್ಪಾದನೆ ಮಾಡುವುದರಲ್ಲಿ ರಾಜ್ಯ ಹಿಂದೆಟ್ಟು ಹಾಕುತ್ತಿರುವುದಕ್ಕೆ ಕಾರಣವೇನು ?

ಇ) ಹಿಡಕಲ್ ಜಲಾಶಯದಲ್ಲಿರುವ ಮೀನುಮರಿ ಉತ್ಪಾದನಾ ಕೇಂದ್ರಕ್ಕೆ ಒದಗಿಸಿರುವ ವರ್ಗವೆಷ್ಟು ಹಾಗೂ ಕಳೆದ ೫ ವರ್ಷಗಳಲ್ಲಿ ಎಷ್ಟು ಮೀನುಮರಿಗಳು ಉತ್ಪಾದನೆ ಆಗಿದೆ ಹಾಗೂ ಅದನ್ನು ವಿತರಣೆ ಮಾಡಿರುವ ವಿವರ ಕೊಡುವುದು ?

ಈ) ಹಿಡಕಲ್ ಜಲಾಶಯದಲ್ಲಿ ಮೀನು ಉತ್ಪಾದನೆ ಹಾಗೂ ಸಂರಕ್ಷಣೆ ಹಾಗೂ ಇನ್ನೂ ಇದರ ಅಭ್ಯಾಸದ ಬಗ್ಗೆ ಸರ್ಕಾರಿ ಪ್ರೌಢಶಾಲಾ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲು ಸರ್ಕಾರದ ಕಾರ್ಯಕ್ರಮವೇನು ?

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು).—

ಅ) ಈ ಕೆಳಗೆ ತಿಳಿಸಿರುವಂತೆ ರಾಜ್ಯದಲ್ಲಿ ಒಟ್ಟು ೩೪ ಮೀನುಮರಿ ಉತ್ಪಾದಕ ಘಟಕಗಳು ಇವೆ:—